


೧೫ನೇ ನವಂಬರ್, ೧೮೮೨, ಕಾರ್ತಿಕಶುಕ್ಲ ಪಂಚಮಿ, ಬುಧವಾರದಂದು ಪರಮಹಂಸರು ರಾಖಾಲನೇ ಮೊದಲಾದ ಒಬ್ಬಿಬ್ಬರು ಭಕ್ತರೊಡನೆ ಮಾಸ್ಟರನ್ನೂ ವಿಲ್‌ಸನ್ ಸರ್ಕಸ್ಸಿಗೆ ಕರೆದುಕೊಂಡು ಹೋಗಲು ವಿದ್ಯಾಸಾಗರನ ಶಾಲೆಯ ಹತ್ತಿರಕ್ಕೆ ಗಾಡಿಯಲ್ಲಿ ಬಂದರು. ಈಗ ಎಲ್ಲರೂ ಮೈದಾನದ ಕಡೆ ತೆರಳು ತ್ತಿದ್ದಾರೆ. ಗಾಡಿ ಜನಸಂದಣಿಯಿಂದ ಕೂಡಿದ ಚಿತ್ಪುರ ರಸ್ತೆಯ ಮಾರ್ಗವಾಗಿ ಹೋಗಲಾರಂಭಿಸಿತು. ಪರಮಹಂಸರ ಆನಂದಕ್ಕೆ ಪಾರವೇ ಇಲ್ಲ. ಚಿಕ್ಕ ಮಕ್ಕಳ ಹಾಗೆ ಗಾಡಿಯ ಈ ಕಡೆಯ ಕಿಟಕಿಯಿಂದ ಒಮ್ಮೆ, ಆ ಕಡೆಯ ಕಿಟಕಿಯಿಂದ ಒಮ್ಮೆ ಹೀಗೆ ಹೊರಕ್ಕೆ ಬಗ್ಗಿ ನೋಡುತ್ತ ರಸ್ತೆಯ ಜನರನ್ನು ಸಂಬೋಧಿಸುತ್ತಿರು ವರೋ ಏನೋ ಎಂಬಂತೆ ತಮಗೆ ತಾವೇ ಹೇಳಿಕೊಳ್ಳುತ್ತಿದ್ದಾರೆ: "ಹೊಟ್ಟೆಪಾಡಿಗಾಗಿ ಎಲ್ಲರೂ ಹೋಗುತ್ತಿದ್ದಾರೆ. ಯಾರೂ ಭಗವಂತನ ಕಡೆಗೆ ದೃಷ್ಟಿಯನ್ನೇ ಇಟ್ಟಿಲ್ಲ."

ಗಾಡಿ ಸರ್ಕಸ್ಸಿನ ಹತ್ತಿರಕ್ಕೆ ಬಂದಿತು. ಭಕ್ತರು ಸುಲಭ ಬೆಲೆಯ ಟಿಕೆಟ್ಟುಗಳನ್ನು ಕೊಂಡುಕೊಂಡು ಪರಮಹಂಸರನ್ನು ಒಂದು ಎತ್ತರವಾದ ಜಾಗದಲ್ಲಿ ಕೂರಿಸಿ ತಾವೂ ಒಂದು ಬೆಂಚಿನ ಮೇಲೆ ಕುಳಿತುಕೊಂಡರು. ಪರಮಹಂಸರು ಆನಂದದಿಂದ ಹೇಳು ತ್ತಿದ್ದಾರೆ: "ಭೇಷ್! ಇಲ್ಲಿಂದ ಬಹಳ ಚೆನ್ನಾಗಿ ಕಾಣುತ್ತದೆ." ರಂಗಭೂಮಿಯಲ್ಲಿ ಅನೇಕ ವಿಧದ ಸಾಹಸ ಕಾರ್ಯಗಳು ನಡೆಯ ಲಾರಂಭಿಸಿದುವು. ಒಂದು ಕುದುರೆ ಒಂದು ಗುಂಡಾದ ಮಾರ್ಗ ದಲ್ಲಿ ಓಡಲಾರಂಭಿಸಿತು. ಅದರ ಮೇಲೆ ಒಬ್ಬ ಆಂಗ್ಲ ಮಹಿಳೆ ಒಂಟಿಕಾಲಿನಲ್ಲಿ ನಿಂತುಕೊಂಡಿದ್ದಳು. ಆಕೆಯ ಮುಂದೆ ಮಧ್ಯೆ ಮಧ್ಯೆ ಆ ದಾರಿಯ ಮೇಲೆ ಕಬ್ಬಿಣದ ಭಾರಿ ಭಾರಿ ಉಂಗುರ ಗಳನ್ನು ನೇತುಹಾಕಿದ್ದರು. ಕುದುರೆ ಪ್ರತಿಯೊಂದು ಉಂಗುರದ ಕೆಳಗೆ ಹೋದಾಗಲೆಲ್ಲ ಆ ಮಹಿಳೆ ಕುದುರೆಯಿಂದ ನೆಗೆದು, ಆ ಉಂಗುರದ ಮೂಲಕ ಹಾದು ಮತ್ತೆ ಒಂಟಿ ಕಾಲಿನಲ್ಲೇ ಆ ಕುದುರೆಯ ಬೆನ್ನುಮೇಲಕ್ಕೆ ಇಳಿದು ಮುಂದುವರಿಯುತ್ತಿದ್ದಳು. ಕುದುರೆ ಆ ಗುಂಡಾದ ಮಾರ್ಗದಲ್ಲಿ ಮತ್ತೆ ಮತ್ತೆ ಸುತ್ತುತ್ತಲೇ ಇತ್ತು; ಆ ಮಹಿಳೆ ಕೂಡ ಎಲ್ಲೂ ತಪ್ಪದೆ ಆ ಕುದುರೆಯ ಮೇಲೆ ಸಕಾಲಕ್ಕೆ ಆ ಉಂಗುರಗಳ ಮೂಲಕ ಹಾದು ಹಾದು ಇಳಿದು ಮುಂದುವರಿಯುತ್ತಲೇ ಇದ್ದಳು.

ಸರ್ಕಸ್ಸು ಮುಗಿಯಿತು. ಪರಮಹಂಸರು ಮತ್ತು ಭಕ್ತರು ಗಾಡಿಯ ಹತ್ತಿರಕ್ಕೆ ಬಂದರು. ಚಳಿ ಶುರುವಾಗಿದೆ. ಹಸುರು ಶಾಲು ಹೊದ್ದುಕೊಂಡು ಪರಮಹಂಸರು ಭಕ್ತರೊಡನೆ ಮಾತುಕತೆ ಯಾಡುತ್ತ ಮೈದಾನದಲ್ಲಿ ನಿಂತುಕೊಂಡಿದ್ದಾರೆ. ಶ್ರೀರಾಮಕೃಷ್ಣರು ಮಾಸ್ಟರನ್ನು ಕುರಿತು ಹೇಳುತ್ತಿದ್ದಾರೆ: "ನೋಡಿದೆಯಾ, ಹೇಗೆ ಆ ಕುದುರೆ ಮಿಂಚಿನ ವೇಗದಲ್ಲಿ ಓಡುತ್ತಿದ್ದರೂ ಆ ಮಹಿಳೆ ಒಂಟಿ ಕಾಲಿನಲ್ಲಿ ಅದರ ಮೇಲೆ ನಿಂತುಕೊಂಡಿರುತ್ತಿದ್ದಳು? ಅದು ಎಂಥ ಕಷ್ಟವಾದ ಸಾಹಸಕಾರ್ಯ! ಹಾಗೆ ಮಾಡಬೇಕಾದರೆ ಆಕೆ ಎಷ್ಟು ಕಾಲ ಅಭ್ಯಾಸ ಮಾಡಿರಬೇಕು! ಒಂದು ಸ್ವಲ್ಪವಾದರೂ ಅಜಾಗ ರೂಕಳಾದಳು ಎಂದರೆ ಕೈಕಾಲು ಮುರಿದುಕೊಳ್ಳುವ ಸಂಭವ. ಪ್ರಾಣವೂ ಹೋಗುವ ಸಂಭವ. ಸಂಸಾರಿಯ ಜೀವನವೂ ಇದೇ ರೀತಿ ಕಠಿಣ. ಎಲ್ಲೋ ಕೆಲವರು ಮಾತ್ರ ಭಗವಂತನ ಕೃಪೆಯಿಂದ, ಸಾಧನೆ ಭಜನೆಯ ತೀವ್ರತೆಯಿಂದ ಮತ್ತು ಅಭ್ಯಾಸಯೋಗ ಬಲದಿಂದ ಅದರಲ್ಲಿ ಜಯಶೀಲರಾಗುತ್ತಾರೆ. ಪ್ರತಿದಿನ ಸಾಧನೆ ಭಜನೆಯ ಅಭ್ಯಾಸ ಅತ್ಯಂತ ಆವಶ್ಯಕ; ಇಲ್ಲದಿದ್ದರೆ ಸಂಸಾರದಲ್ಲಿ ಸರಿಯಾಗಿ ಇರಲಾಗುವುದಿಲ್ಲ.

"ಅಭ್ಯಾಸಯೋಗದಿಂದ ಮಾತ್ರ ಸಂಸಾರದಲ್ಲಿದ್ದೂ ಭಗ ವಂತನ ಕಡೆಗೆ ಹೋಗಬಹುದು. ಕಾಮಾರಪುಕುರಿನಲ್ಲಿ ಬಡಗಿಯ ಹೆಂಗಸರು ಅವಲಕ್ಕಿ ವ್ಯಾಪಾರ ಮಾಡುತ್ತಾರೆ. ಅವರು ಎಷ್ಟು ಕಡೆಗೆ ಕಣ್ಣಿಟ್ಟು ಕೆಲಸ ಮಾಡುತ್ತಾರೆ ಎಂಬುದನ್ನು ಸ್ವಲ್ಪ ಕೇಳು. ಏತ ಅವಲಕ್ಕಿಯನ್ನು ಕುಟ್ಟುತ್ತಲೇ ಇರುತ್ತದೆ. ಹೆಂಗಸು ಒಂದು ಕೈಯಿಂದ ಒರಳಿಗೆ ಬತ್ತವನ್ನು ತಳ್ಳಿಕೊಡುತ್ತಿರುತ್ತಾಳೆ. ಇನ್ನೊಂದು ಕೈಯಿಂದ ಮಗುವನ್ನು ತೊಡೆಯ ಮೇಲೆ ಮಲಗಿಸಿಕೊಂಡು ಹಾಲು ಕೊಡುತ್ತಿರುತ್ತಾಳೆ. ಸಾಲದುದಕ್ಕೆ ಅದೇ ಸಮಯಕ್ಕೆ ಗಿರಾಕಿಗಳು ಬೇರೆ ಬಂದಿರುತ್ತಾರೆ. ಆ ಕಡೆ ಏತ ಬತ್ತವನ್ನು ಕುಟ್ಟುತ್ತಲೇ ಇರುತ್ತದೆ. ಈ ಕಡೆ ಗಿರಾಕಿಗಳೊಡನೆ ವ್ಯಾಪಾರ ಮಾಡುತ್ತಿರುತ್ತಾಳೆ : "ಬಾಕಿ ಏನು ಕೊಡಬೇಕಾಗಿದೆಯೊ ಅದನ್ನು ಮೊದಲು ಕೊಟ್ಟುಬಿಟ್ಟು, ಬಳಿಕ ಸಾಮಾನು ತೆಗೆದುಕೊಂಡು ಹೋಗಿ." ಹಾಗೇ ನೋಡು, ಮಗುವಿಗೆ ಹಾಲು ಕೊಡುವುದು, ಒರಳಿಗೆ ಬತ್ತವನ್ನು ತಳ್ಳುವುದು, ಅವಲಕ್ಕಿಯಾದ ನಂತರ ಅದನ್ನು ಒರಳಿನಿಂದ ಹೊರಕ್ಕೆ ತೆಗೆಯುವುದು, ಗಿರಾಕಿಗಳೊಡನೆ ವ್ಯಾಪಾರ ಮಾಡುವುದು—ಇಷ್ಟನ್ನೂ ಒಟ್ಟಿಗೆ ಮಾಡುತ್ತಾಳೆ. ಇದಕ್ಕೇ ಅಭ್ಯಾಸಯೋಗ ಅಂತ ಹೆಸರು. ಆದರೂ ಏತದ ಮೊನೆ ಎಲ್ಲಿ ಕೈಯನ್ನು ಜಜ್ಜಿಬಿಡುವುದೊ ಎಂದು ಆಕೆ ತನ್ನ ಮನಸ್ಸಿನ ಹದಿನೈದು ಆಣೆ ಭಾಗವನ್ನು ಒರಳ ಕಡೆಗೇ ಇಟ್ಟಿರುತ್ತಾಳೆ. ಉಳಿದುಕೊಂಡಿರುವ ಆ ಒಂದಾಣೆ ಮನಸ್ಸಿನಿಂದ ಮಗುವಿಗೆ ಹಾಲು ಕೊಡುವುದು, ಗಿರಾಕಿಗಳೊಡನೆ ವ್ಯಾಪಾರ ಮಾಡುವುದು ಇವೇ ಮೊದಲಾದ ಕೆಲಸಗಳನ್ನು ಮಾಡುತ್ತಾಳೆ. ಅದೇ ರೀತಿ ಯಾರು ಸಂಸಾರಸ್ಥರೊ ಅವರು ತಮ್ಮ ಮನಸ್ಸಿನ ಹದಿನೈದು ಆಣೆ ಭಾಗವನ್ನು ಭಗವಂತನಿಗೆ ಮೀಸಲಾಗಿ ಇಡಬೇಕು; ಉಳಿದ ಒಂದಾಣೆ ಮನಸ್ಸಿನಿಂದ ಬಾಕಿ ಎಲ್ಲಾ ಕೆಲಸ ಕಾರ್ಯಗಳನ್ನೂ ಮಾಡಿಕೊಳ್ಳ ಬೇಕು. ಇದನ್ನು ಅಭ್ಯಾಸಯೋಗ ದಿಂದ ಸಾಧಿಸಿಕೊಳ್ಳಬೇಕು."

—ಶ್ರೀರಾಮಕೃಷ್ಣ ವಚನವೇದದಿಂದ